

ವಧೂವರರಿಗೆ ವೇದಿಕೆ ಕಲ್ಪಿಸುವ ವೆಬ್‌ಸೈಟ್‌ನಲ್ಲಿ ಸಂಬಂಧವೊಂದು ಕುದುರಿದ ಖುಷಿಯಲ್ಲಿದ್ದ ಯುವಕ ಕನಸು ಕಾಣಲಾರಂಭಿಸಿದ. ಭವಿತವ್ಯ ನೆನಪಿಸಿಕೊಂಡರೆ ಅವನಿಗೆ ದಿವ್ಯಾನುಭವ. ಎರಡು ವರ್ಷಗಳಿಂದ ಹುಡುಗಿಗಾಗಿ ಹುಡುಕಾಡಿದ್ದೇ ಬಂತು. ಈಗ ಗಳಿಗೆ ಕೂಡಿಬಂತಲ್ಲ ಎಂದು ಆನಂದತುಂದಿಲನಾಗಿದ್ದ ಅವನು ಕುತೂಹಲಕ್ಕೆಂದು ಮತ್ತೆ ಆ ವೆಬ್‌ಸೈಟ್‌ಗೆ ಲಾಗಿನ್ ಆದ.

ಹುಡುಗಿಯ ಪ್ರೊಫೈಲ್ ಹಾಗೇ ಇತ್ತು. ಇನ್ನಷ್ಟು ವರರು ಅವಳಿಗೆ ಕಾಳು ಹಾಕುತ್ತಿದ್ದುದು, ಅದಕ್ಕೆ ಆಕೆ ಪ್ರತಿಕ್ರಿಯೆ ನೀಡುತ್ತಿದ್ದುದನ್ನು ಕಂಡು ದಿಗ್ಭ್ರಾಂತನಾದ. ಹುಡುಗಿಯ ಜೊತೆಗೆ ಹರಟುತ್ತಾ ಅವಳನ್ನು ಬಾಯಿಬಿಡಿಸಲು ಅವನು ಮಾಡಿದ ಯತ್ನಗಳೆಲ್ಲ ವಿಫಲವಾದವು. ಕೊನೆ ಪ್ರಯತ್ನವಾಗಿ ಅವನು ಎಡತಾಕಿದ್ದು ಪತ್ತೆದಾರಿ ಏಜೆನ್ಸಿಯೊಂದನ್ನು. ಆ ಏಜೆನ್ಸಿ ಹುಡುಗಿಯು ಸಾಕಷ್ಟು ವರರನ್ನು ಪರೀಕ್ಷೆಗೆ ಒಳಪಡಿಸುತ್ತಿರುವ ಸತ್ಯವೊಂದನ್ನು ವಾರಗಳಲ್ಲೇ ಪತ್ತೆಮಾಡಿ ಕೊಟ್ಟಿತು. ಅವಳ ಸ್ನೇಹಿತ–ಸ್ನೇಹಿತೆಯರ ಬಳಗ, ಆಸಕ್ತಿಗಳು, ನೋಡುವ ಸಿನಿಮಾಗಳ ಜಾಯಮಾನ, ಎಡತಾಕುವ ರೆಸ್ಟೊರೆಂಟ್‌ಗಳು, ಬಟ್ಟೆ ಕೊಳ್ಳುವ ಮಳಿಗೆಗಳು, ಎಷ್ಟು ದಿನಗಳಿಗೊಮ್ಮೆ ಶಾಪಿಂಗ್ ಮಾಡುತ್ತಾಳೆ ಎಂಬೆಲ್ಲ ಮಾಹಿತಿಯನ್ನೂ ನೀಡಿತು.

ಅದಕ್ಕಿಂತ ಸಾಕಷ್ಟು ಭಿನ್ನವಾದ ಇನ್ನೊಂದು ಪ್ರಕರಣ ನಗರ ನಾಗರಿಕತೆಯಲ್ಲಿ ಅಪರೂಪಕ್ಕೊಮ್ಮೆ ಕಂಡಿರಲಿಕ್ಕೆ ಸಾಕು. ವಿದೇಶದಲ್ಲಿದ್ದ ಅಪ್ಪ–ಅಮ್ಮ ಮಗಳನ್ನು ಓದಲೆಂದು ದೆಹಲಿಯ ಪೇಯಿಂಗ್ ಗೆಸ್ಟ್‌ನಲ್ಲಿ ಇರಿಸಿದ್ದರು. ಪ್ರತಿ ತಿಂಗಳು ತಪ್ಪದೇ ಮಗಳ ಬ್ಯಾಂಕ್ ಉಳಿತಾಯ ಖಾತೆಗೆ ಹಣ ಜಮಾ ಮಾಡುತ್ತಿದ್ದರು. ಕುತೂಹಲಕ್ಕೆಂದು ಅಪ್ಪ ಮಗಳ ಖಾತೆಯನ್ನು ಗಮನಿಸಿದರು. ನಾಲ್ಕು ತಿಂಗಳುಗಳಿಂದ ನಯಾಪೈಸೆಯನ್ನೂ ಮಗಳು ‘ಡ್ರಾ’ ಮಾಡಿರಲಿಲ್ಲ. ಹಣವನ್ನೇ ತೆಗೆದುಕೊಳ್ಳದೆ ಮಗಳು ಹೇಗೆ ಜೀವನ ನಡೆಸುತ್ತಿದ್ದಾಳೆ ಎಂಬ ಅನುಮಾನದ ಗುಂಗಿಹುಳ ಅವರನ್ನು ಕೊರೆಯತೊಡಗಿತು. ಮಗಳ ಯೋಗ–ಕ್ಷೇಮ ವಿಚಾರಿಸುತ್ತಾ ಪರೋಕ್ಷವಾಗಿ ಅವರು, ‘ಇನ್ನಷ್ಟು ಹಣವೇನಾದರೂ ಬೇಕೇನಮ್ಮ’ ಎಂದೂ ಕೇಳಿದರು. ಮಗಳು ಹಣಕ್ಕೇನೂ



